

ವಾತಾವರಣದಲ್ಲಿ ದೇಹವನ್ನು ಬೆಚ್ಚಗಿಡುವುದರ ಜೊತೆಗೆ ಸ್ಪೋರ್ಟಿ ಲುಕ್ ಹೆಚ್ಚಿಸಲು ಸಹಾಯಕ. ಸ್ವೆಟ್‌ಶರ್ಟ್‌ಗಳು ಸುಕ್ಕು ನಿರೋಧಕವಾಗಿದ್ದು, ದೇಹದಿಂದ ಹೀರಿಕೊಂಡ ಬೆವರನ್ನು ತ್ವರಿತವಾಗಿ ಒಣಗಿಸಲು ಅನುಕೂಲ. ಈ ಉಡುಗೆಗಳನ್ನು ಎಷ್ಟೇ ಬಾರಿ ಧರಿಸಿ, ಶುಚಿಗೊಳಿಸಿದರೂ ತನ್ನ ಮೂಲ ಆಕಾರವನ್ನು ಹಾಗೆಯೇ ಕಾಯ್ದುಕೊಳ್ಳುತ್ತವೆ. ಇದಕ್ಕೆ ಕಾರಣ ಈ ಬಟ್ಟೆಯ ಸ್ಟ್ರೆಚ್ ಮತ್ತು ಫಾರ್ಮ್ ಫಿಟ್ಟಿಂಗ್ ಗುಣಲಕ್ಷಣಗಳು.



ಕಾಟನ್‌ನಿಂದ ತಯಾರಿಸಿದ ಸ್ಪೋರ್ಟ್ಸ್ ಉಡುಪುಗಳು ಸ್ವೆಟ್‌ಶರ್ಟ್‌ಗಳಂತೆ ಕಂಫರ್ಟ್. ಯೋಗ, ವಾಕಿಂಗ್–ಜಾಗಿಂಗ್ ಹಾಗೂ ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಹೆಚ್ಚು ಆರಾಮದಾಯಕ. ಇತರ ಬಟ್ಟೆಗಳಿಗಿಂತ ಈ ಕಾಟನ್ ಬಟ್ಟೆಯು ದೇಹಕ್ಕೆ ಹೆಚ್ಚು ಒಗ್ಗುತ್ತದೆ. ಕಿರಿಕಿರಿ ಉಂಟು ಮಾಡುವುದಿಲ್ಲ ಹಾಗೂ ಹಗುರವೂ ಹೌದು.

ಕ್ರೀಡಾ ಉಡುಪುಗಳನ್ನು ಸಾಮಾನ್ಯವಾಗಿ ವಿವಿಧ ವಸ್ತುಗಳು ಮತ್ತು ಮಿಶ್ರಣಗಳಿಂದ ತಯಾರಿಸಲಾಗುತ್ತದೆ. ಹೀಗೆ ತಯಾರಿಸಿದ ಬಟ್ಟೆಗಳಲ್ಲಿ ಹೆಚ್ಚು ಜನಪ್ರಿಯಗೊಂಡವು ಪಾಲಿಯೆಸ್ಟರ್, ನೈಲಾನ್ ಮತ್ತು ಸ್ಪ್ಯಾಂಡೆಕ್ಸ್. ಇಂಥ ಉಡುಪು ಹಗುರವಾದ, ಹೆಚ್ಚು ಬಾಳಿಕೆ ಬರುವ ಹಾಗೂ ತೇವಾಂಶ ಹೀರಿಕೊಳ್ಳಲು ಸಹಾಯಕ. ಈ ಬಟ್ಟೆಗಳ ಜೊತೆಗೆ ಇಂಟರ್‌ಲಾಕ್ ಫ್ಯಾಬ್ರಿಕ್, ಪಾಲಿಯೆಸ್ಟರ್–ಸ್ಪೆಂಡೆಕ್ಸ್ ಫ್ಯಾಬ್ರಿಕ್, ಫ್ರೆಂಚ್ ಟೆರ್ರಿ ಫ್ಯಾಬ್ರಿಕ್, ಮೆಶ್ ಫ್ಯಾಬ್ರಿಕ್ ಬಟ್ಟೆಗಳು ಹೆಚ್ಚು ಬಳಕೆಯಲ್ಲಿವೆ.

ತ್ವರಿತವಾಗಿ ಒಣಗುವ ಮತ್ತು ಶಿಲೀಂಧ್ರ ನಿರೋಧಕವಾಗಿರುವ ನೈಲಾನ್ ಬಟ್ಟೆಯನ್ನು ಕ್ರೀಡಾ ಉಡುಪುಗಳ ತಯಾರಿಯಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಇತರ ಬಟ್ಟೆಗಳಿಗಿಂತ ಹೆಚ್ಚು ಪ್ರಮಾಣದಲ್ಲಿ ಗಾಳಿಯಾಡಲು ಅನುವು ಮಾಡಿಕೊಡುತ್ತವೆ. ತಂಪಾದ ಗಾಳಿಯು ಚರ್ಮವನ್ನು ತಲುಪಲು ಸಹಕಾರಿಯಾಗಿರುವ ಈ ಬಟ್ಟೆಯಿಂದಾಗಿ ಬೆವರನ್ನು ಬೇಗನೇ ಹೀರಿಕೊಳ್ಳುತ್ತದೆ. ಬೆವರು ದುರ್ಗಂಧಕ್ಕೆ ಪರಿವರ್ತನೆಗೊಳ್ಳಲು ಬಿಡದೆ ಸುರಕ್ಷಿತವಾಗಿ ಆವಿಯಾಗುವಂತೆ ನೋಡಿಕೊಳ್ಳುತ್ತವೆ. ಆರಾಮದಾಯಕ ಅನುಭವ ಒದಗಿಸುವುದರ ಜೊತೆಗೆ ದೇಹದ ತಾಪಮಾನ ನಿಯಂತ್ರಿಸುತ್ತದೆ.

ಸ್ಪೋರ್ಟಿ ಲುಕ್‌ನಲ್ಲಿ ಕಾಣಿಸಿಕೊಳ್ಳಲು ಜೆರ್ಸಿ, ಟಿ ಶರ್ಟ್, ಕ್ರ್ಯೂ ನೆಕ್ಸ್, ಲೆಗ್ಗಿಂಗ್ಸ್ ಮತ್ತು ಅಥ್ಲೆಟಿಕ್ ಶಾರ್ಟ್ಸ್ ಬಳಸುವುದು ಉತ್ತಮ. ಈ ಬಟ್ಟೆಗಳನ್ನು ಧರಿಸಿದಾಗ ತೀರಾ ಸಾಮಾನ್ಯ ಎನಿಸುವ ಮೇಕಪ್ ಮಾಡಿಕೊಳ್ಳುವುದರಿಂದ ಮಹಿಳೆಯರಿಗೆ ವಿಶೇಷ ಲುಕ್ ಸಿಗುತ್ತದೆ. ಜೊತೆಗೆ ಪೋನಿಟೇಲ್ ಹೇರ್‌ಸ್ಟೈಲ್ ಮಾಡಿಕೊಳ್ಳುವುದು ಉತ್ತಮ. ಪುರುಷರಿಗೆ ನಿರ್ದಿಷ್ಟ ಹೇರ್‌ಸ್ಟೈಲ್ ಹಾಗೂ ಮೇಕಪ್ ಅಂತೇನೂ ಇಲ್ಲ. ಅಗತ್ಯಬಿದ್ದರೆ ಸನ್ ಸ್ಕ್ರೀನ್ ಲೋಷನ್ ಬಳಸಬಹುದು.

## ಸ್ಪೋರ್ಟಿ ಕ್ಯಾಷುವಲ್...

ಕಾಟನ್ ಪ್ಯಾಂಟ್, ಶಾರ್ಟ್ಸ್ ಅಥವಾ ಜೀನ್ಸ್, ಹೆವಿವೇಯ್ಟ್ ಟಿ ಶರ್ಟ್ ಅಥವಾ ಸ್ವೆಟ್‌ಶರ್ಟ್, ಬಟನ್‌ಡೌನ್ ಅಥವಾ ಪೋಲೊಶರ್ಟ್. ಬೆಲ್ ಮತ್ತು ಟೆನ್ನಿಸ್ ಬೂಟುಗಳನ್ನು ಧರಿಸುವುದಕ್ಕೆ ಸ್ಪೋರ್ಟಿ ಕ್ಯಾಷುವಲ್ ಎನ್ನಲಾಗುತ್ತದೆ. ಪಟ್ಟಿಯುಳ್ಳ ಮಣಿಕಟ್ಟಿನ ಪಟ್ಟಿಯನ್ನು ಹೊಂದಿರುವ ಜಾಕೆಟ್ ಅಥವಾ ಜೆರ್ಸಿ ಶೈಲಿಯ ಮೇಲ್ಭಾಗ ಹೊಂದಿರುವ ಬಟ್ಟೆಗಳು ಸ್ಪೋರ್ಟಿ ಕ್ಯಾಷುವಲ್‌ಗೆ ಉತ್ತಮ ಆಯ್ಕೆ.




## ಮಹಿಳೆಯರ ಕ್ರೀಡಾ ಉಡುಪು

ಲೆಗ್ಗಿಂಗ್ಸ್, ಶಾರ್ಟ್ಸ್, ಡ್ರೆಸ್, ಜಾಕೆಟ್, ಟಿ ಶರ್ಟ್ (ಬಿಗಿಯಾದ ಅಥವಾ ದೊಗಳೆ) ಕೇಪ್ರಿ ಪ್ಯಾಂಟ್ಸ್ (Capri pants), ಸ್ಲೀವ್‌ಲೆಸ್ ಶರ್ಟ್, ಸ್ವೆಟ್‌ಪ್ಯಾಂಟ್ಸ್, ಸೈಕ್ಲಿಂಗ್ ಶರ್ಟ್ಸ್, ಆ್ಯಕ್ಟೀವ್ ಟೈಟ್ಸ್, ಆ್ಯಕ್ಟೀವ್ ವೇರ್, ಡಾಲ್ಫಿನ್ ಶಾರ್ಟ್ಸ್ ಮತ್ತು ಟೈಟ್ಸ್.

## ಪುರುಷರ ಕ್ರೀಡಾ ಉಡುಪು

ಅಥ್ಲೆಟಿಕ್ ಸಾಕ್ಸ್, ಸ್ಪೋರ್ಟ್ಸ್ ವಿಯರ್ ಸೆಟ್ಸ್, ಸ್ಪೋರ್ಟ್ಸ್ ಶಾರ್ಟ್ಸ್, ಟಿ ಶರ್ಟ್ಸ್ ಮತ್ತು ಜೆರ್ಸಿ, ಸ್ವೆಟ್ ಶರ್ಟ್ಸ್ ಮತ್ತು ಹೂಡೀಸ್, ಆ್ಯಕ್ಟೀವ್ ವಿಯರ್ ಲೆಗ್ಗಿಂಗ್ಸ್, ಟ್ರ್ಯಾಕ್ ಜಾಕೆಟ್ಸ್, ಟ್ರ್ಯಾಕ್ ಪ್ಯಾಂಟ್ಸ್ ಮತ್ತು ಪೋಲೊ ಶರ್ಟ್ಸ್.

## ಅಭಿಮಾನದ ಪ್ರತೀಕ

ಭಾರತದಲ್ಲಿ ಕ್ರಿಕೆಟ್‌ಗೆ ಎಲ್ಲಿಲ್ಲದ ಜನಪ್ರಿಯತೆ ಇದೆ. ಅಂತೆಯೇ ಆಯಾ ಕಾಲದ ಜನಪ್ರಿಯ ಆಟಗಾರರ ಕ್ರೀಡಾ ಉಡುಪುಗಳ ಅನುಕರಣೆಯೂ ಹೆಚ್ಚು ಚಾಲ್ತಿಯಲ್ಲಿರುವುದನ್ನು ಕಾಣಬಹುದು. ಸಚಿನ್ ತೆಂಡೂಲ್ಕರ್, ಎಂ.ಎಸ್. ಧೋನಿ, ಯುವರಾಜ್ ಸಿಂಗ್, ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಹೀಗೆ ಅವರವರ ಅಭಿಮಾನಿಗಳು ಅಭಿಮಾನದ ಪ್ರತೀಕವಾಗಿ ಟೀಮ್ ಇಂಡಿಯಾ, ಅದರಲ್ಲೂ ನೆಚ್ಚಿನ ಆಟಗಾರರ ಹೆಸರು ಹಾಗೂ ಜೆರ್ಸಿ ನಂಬರ್ ಮುದ್ರಿಸಿದ ಬಟ್ಟೆಗಳನ್ನು ಧರಿಸುವುದನ್ನು ಕಾಣಬಹುದು.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಸಮಯದಲ್ಲಂತೂ ಎಲ್ಲೆಡೆ ತಮ್ಮ ನೆಚ್ಚಿನ ತಂಡದ ಜೆರ್ಸಿ ತೊಟ್ಟು ಸಂಭ್ರಮಿಸುವ ಪರಿಯಂತೂ ಬಲು ಸೋಜಿಗ. ಪಂದ್ಯಗಳು ನಡೆಯುವ ಕ್ರೀಡಾಂಗಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಈ ಜೆರ್ಸಿಗಳಿಂದಲೇ ತುಂಬಿತುಳುಕುತ್ತಿರುತ್ತವೆ. ಕ್ರಿಕೆಟ್‌ನಂತೆಯೇ, ಪ್ರೊ ಕಬಡ್ಡಿ, ಫುಟ್‌ಬಾಲ್ ಪಂದ್ಯಾವಳಿಗಳ ವೇಳೆಯೂ ಅಭಿಮಾನದ ಪ್ರತೀಕದ ಜೆರ್ಸಿಗಳನ್ನು ಕಾಣಬಹುದು.

ವೃತ್ತಿಪರ ಆಟಗಾರರು ಮತ್ತು ಪಂದ್ಯಾವಳಿಗಳನ್ನು ಹೊರತು ಪಡಿಸಿ ನೋಡುವುದರೆ ಎಲ್ಲ ಕ್ರೀಡೆಗಳ ಟೂರ್ನಮೆಂಟ್‌ಗಳಲ್ಲೂ ಈ ಕ್ರೀಡಾ ಉಡುಪುಗಳು ಮಹತ್ತರ ಪಾತ್ರ ವಹಿಸುತ್ತವೆ. ಆಯಾ ತಂಡಗಳು ನಗರಗಳಿಗೆ ಲಗ್ಗೆಯಿಟ್ಟು ನಿರ್ದಿಷ್ಟವಾದ ಜೆರ್ಸಿಗೆ ಬೇಡಿಕೆ ಸಲ್ಲಿಸುತ್ತಾರೆ. ಆ ತಂಡಗಳಿಗೆ, ಆ ಜರ್ಸಿಗಳನ್ನು ತೊಟ್ಟು ಪಂದ್ಯಗಳಲ್ಲಿ ಪಾಲ್ಗೊಳ್ಳುವುದು ಪಂದ್ಯ ಗೆಲ್ಲುವುದಕ್ಕಿಂತಲೂ ಮಿಗಿಲು.